ದಿನಾಂಕ: 26.09.2015ರಂದು ಡಾ|| ಶಿವಲಿಂಗಯ್ಯ ಎಂ. ನಿರ್ದೇಶಕರು (ಪ್ರಭಾರ), ನೆಫ್ರೋ-ಯುರಾಲಜಿ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ನಿರ್ದೇಶಕರ ಕೊಠಡಿಯಲ್ಲಿ ಬೆಳಿಗ್ಗೆ 11.00 ಗಂಟೆಗೆ ಜರುಗಿದ ಟೆಂಡರ್ ಪ್ರೀ- ಬಿಡ್ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:

| | | |
|---|---|---|
| 1) | ಡಾ|| ಶಿವಲಿಂಗಯ್ಯ ಎಂ.<br>ನಿರ್ದೇಶಕರು ಪ್ರಭಾರ,<br>ನೆಫ್ರೋ-ಯುರಾಲಜಿ ಸಂಸ್ಥೆ. | ಅಧ್ಯಕ್ಷರು |
| 2) | ಡಾ|| ಉಮೇಶ ಎಲ್.<br>ವೈದ್ಯಕೀಯ ಅಧೀಕ್ಷಕರು<br>ನೆಫ್ರೋ-ಯುರಾಲಜಿ ಸಂಸ್ಥೆ. | ಸದಸ್ಯರು |
| 3) | ಡಾ|| ಪ್ರದೀಪ್ ಎಂ.ಎಸ್.<br>ವಿಭಾಗದ ಮುಖ್ಯಸ್ಥರು<br>ನೆಫ್ರೋ-ಯುರಾಲಜಿ ಸಂಸ್ಥೆ. | ಸದಸ್ಯರು |
| 4) | ಡಾ|| ಆಶಾ ಎಸ್.<br>ಆಡಳಿತಾಧಿಕಾರಿಗಳು<br>ನೆಫ್ರೋ-ಯುರಾಲಜಿ ಸಂಸ್ಥೆ. | ಸದಸ್ಯ ಕಾರ್ಯದರ್ಶಿಗಳು |

ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ಸಭೆಗೆ ಆಹ್ವಾನಿಸಿ ಸಭೆಯನ್ನು ಜರುಗಿಸಲು ಕೋರಿದರು.

ಈ ಕೆಳಗೆ ನಮೂದಿಸಿರುವ ಸಂಸ್ಥೆಯವರು ಪ್ರೀ-ಬಿಡ್ ಸಭೆಯಲ್ಲಿ ಭಾಗವಹಿಸಿದ್ದರು:

## I. **ಔಷಧಿಗಳು, ಡಿಸ್ಪೋಸಬಲ್ಸ್ ಹಾಗೂ ಇತರೆ ವಸ್ತುಗಳ ಖರೀದಿ**

1. ಮೆ|| ಕುಕ್ ಮೆಡಿಕಲ್ಸ್
2. ಮೆ|| ಮೆರೆಲ್ಸ್ ಫಾರ್ಮಾಸ್ಯುಟಿಕಲ್ಸ್ ಕಂ.
3. ಮೆ|| ಸಂಜಯ್ ಫಾರ್ಮಾ

4. ಮೆ॥ ಓಂ ಫಾರ್ಮಾ

5. ಮೆ॥ ನಿಶಾ ಫಾರ್ಮಾಸ್ಯುಟಿಕಲ್ಸ್

6. ಮೆ॥ ಲುಪಿನ್ ಲಿ.

7. ಮೆ॥ ಏಮ್ಸ್

8. ಮೆ॥ ಬ್ರೌನ್‌ಡೋವ್ ಹೆಲ್ತ್‌ಕೇರ್ ಪ್ರೈ. ಲಿ.

**II. <u>ನಮೂನೆ ಮತ್ತು ವಹಿಗಳ ಮುದ್ರಣ:</u>**

1. ಮೆ॥ ರಾಜಾ ಪ್ರಿಂಟರ್ಸ್

2. ಮೆ॥ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್

ಸಭೆಯಲ್ಲಿ ಈ ಕೆಳಗೆ ನಮೂದಿಸಿರುವ ಸಂಸ್ಥೆಗಳ ಪ್ರತಿನಿಧಿಗಳ ಪ್ರಶ್ನೆಗಳಿಗೆ ನೀಡಿದ ಸ್ಪಷ್ಟೀಕರಣ ಈ ಕೆಳಕಂಡಂತೆ ಇರುತ್ತದೆ.

**I. <u>ಔಷಧಿಗಳು, ಡಿಸ್ಪೋಸಬಲ್ಸ್ ಹಾಗೂ ಇತರೆ ವಸ್ತುಗಳ ಖರೀದಿ :</u>**

| ಕ್ರ. ಸಂ. | ಸಂಸ್ಥೆಯ ಹೆಸರು/ಪ್ರತಿನಿಧಿ | ಪ್ರಶ್ನೆ | ಸ್ಪಷ್ಟೀಕರಣ |
|---|---|---|---|
| 1. | ಮೆ॥ ಕುಕ್ ಮೆಡಿಕಲ್ಸ್ | ಕ್ರಮ ಸಂಖ್ಯೆ 113 ರಿಂದ 120 - D.J. Stents Both End Open ಈ ವಸ್ತುಗಳಿಗೆ ಟೆಂಡರ್‌ನಲ್ಲಿ ನಮೂದಿಸಿರುವ ವಿವರಣೆಯಲ್ಲಿ 3.5 Fr ಹಾಗೂ 4.5 Fr ಬದಲು 3.7 Fr ಹಾಗೂ 4.7 Fr ವಿವರಣೆಯುಳ್ಳ D.J.Stents Both End Open ಗಳಿಗೆ ದರ ನಮೂದಿಸುವ ಬಗ್ಗೆ. | ಟೆಂಡರ್‌ನಲ್ಲಿ ಈ ವಸ್ತುಗಳಿಗೆ ನೀಡಿರುವ ವಿವರಣೆಯ ಪ್ರಕಾರ ನಮೂದಿಸುವ ವಸ್ತುಗಳನ್ನು ಮಾತ್ರ ಅಂಗೀಕರಿಸಲಾಗುವುದು ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |
| 2. | **<u>ಮೆ॥ ಮೆರೆಲ್ಲ್ ಫಾರ್ಮಾಸ್ಯುಟಿಕಲ್ಸ್ ಕಂ.</u>**<br>ಶ್ರೀ. ವಿಜಯ್ ಕುಮಾರ್ ಎಸ್. | ಲೋನ್ ಲೈಸೆನ್ಸ್ ಅಡಿಯಲ್ಲಿ ತಯಾರಿಸಿದ ಔಷಧಿಗಳನ್ನು ಅಂಗೀಕರಿಸಲಾಗುವುದೇ ಎಂಬ ಬಗ್ಗೆ. | ಲೋನ್ ಲೈಸೆನ್ಸ್ ಅಡಿಯಲ್ಲಿ ತಯಾರಿಸಿದ ಔಷಧಿಗಳನ್ನು ಅಂಗೀಕರಿಸಲಾಗುವುದಿಲ್ಲ ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |

| | | | |
|---|---|---|---|
| | | ಟೆಂಡರ್ ದಾಖಲೆ ಚೆಕ್ ಲಿಸ್ಟ್ ಕ್ರಮ ಸಂಖ್ಯೆ 9 ರ ದಾಖಲೆಯನ್ನು ಸಲ್ಲಿಸುವ ಕುರಿತು. | ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ಈಗಾಗಲೆ ದರಗುತ್ತಿಗೆದಾರರಾಗಿದ್ದರೆ ಮಾತ್ರ ಈ ದಾಖಲೆಯನ್ನು ಸಲ್ಲಿಸಬೇಕಾಗಿರುತ್ತದೆ. ಹೊಸದಾಗಿ ಈ ಸಂಸ್ಥೆಯ ಟೆಂಡರ್‌ನಲ್ಲಿ ಭಾಗವಹಿಸುವವರು ಈ ದಾಖಲೆಯನ್ನು ಸಲ್ಲಿಸಬೇಕಾಗಿರುವುದಿಲ್ಲ ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |
| | | ಕ್ರಮ ಸಂಖ್ಯೆ 22,23 ಹಾಗೂ 24 ರ ಔಷಧಿಗಳಿಗೆ ಪಾಲಿಕಾರ್ಬನ್ ಬಾಟಲುಗಳು ಎಂದು ನಮೂದಿಸಲಾಗಿದೆ. ಪಾಲಿಕಾರ್ಬನ್‌ನಲ್ಲಿ<br>(1) ಪಾಲಿಎಥಿಲಿನ್<br>(2) ಪಾಲಿಪ್ರೊಪಿಲೀನ್ ಹಾಗೂ<br>(3) ಪಿ.ವಿ.ಸಿ. ಎಂಬ ಮೂರು ವಿವಿಧ ಬಗೆಗಳಿದ್ದು ಯಾವ ವಿಧದಲ್ಲಿ ತಯಾರಿಸಿದ ಬಾಟಲುಗಳಿಗೆ ದರ ನಮೂದಿಸಬೇಕು ಎಂಬುದರ ಬಗ್ಗೆ. | ಟೆಂಡರ್ ದಾಖಲೆ ಪ್ರಕಾರ ಪುಟ ಸಂಖ್ಯೆ 32ರ ಕಾಲಂ III “"**SPECIFICATIONS FOR I.V. FLUIDS**” ನಲ್ಲಿ ನಮೂದಿಸಿರುವ ಹಾಗೆ ತಯಾರಿಸಿದ ಐ.ವಿ. ದ್ರಾವಣಗಳಿಗೆ ದರ ನಮೂದಿಸುವಂತೆ ಸಮಿತಿಯು ಸ್ಪಷ್ಟೀಕರಣ ನೀಡಿತು. ಹಾಗೂ ಸಂಸ್ಥೆಗೆ ಹಾಲಿ ಸರಬರಾಜು ಆಗುತ್ತಿರುವ ಐ.ವಿ.ದ್ರಾವಣದ ಬಾಟಲುಗಳನ್ನು ತೋರಿಸಲಾಯಿತು. |
| | | ಕ್ರಮ ಸಂಖ್ಯೆ 227 Dialyser (Single Use) FX8 **ಇದು ಒಂದು** ಕಂಪನಿಗೆ ಸೇರಿದ್ದು ಇದಕ್ಕೆ ಸಮನಾದ ಬೇರೆ ತಯಾರಕರು ಉತ್ಪಾದಿಸಿದ Dialyser (Single Use) **ಗೆ** ದರ ನಮೂದಿಸುವ ಬಗ್ಗೆ. | ಟೆಂಡರ್‌ನಲ್ಲಿ Dialyser (Single Use)ಗೆ ನಮೂದಿಸಿರುವ ವಿವರಗಳಿಗೆ ಸಮನಾದ ಯಾವುದೇ ತಯಾರಕರು ಉತ್ಪಾದಿಸಿದ Dialyser (Single Use)ಗಳಿಗೆ ದರ ನಮೂದಿಸಬಹುದು ಹಾಗೂ ಆ ವಸ್ತುವಿನ ಸ್ಯಾಂಪಲ್ ಒದಗಿಸಲು ಸೂಚಿಸಲಾಯಿತು. ಸ್ಯಾಂಪಲ್ ಒಪ್ಪಿಗೆಯಾದ ನಂತರವೇ ಅದನ್ನು ಅಂಗೀಕರಿಸುವುದಾಗಿ ಸಮಿತಿಯು ಸ್ಪಷ್ಟೀಕರಣ ನೀಡಿತು. |
| 3. | **ಮೆ॥ ಓಂ ಫಾರ್ಮಾ:**<br>ಶ್ರೀ. ಶಂಕರ ರೆಡ್ಡಿ | ಈ ಹಿಂದೆ ನಮ್ಮ ಸಂಸ್ಥೆಯ ಟೆಂಡರ್‌ನಲ್ಲಿ ಭಾಗವಹಿಸಲು ಪಡೆದಿರುವ "No Conviction Certificate” ಸಲ್ಲಿಸಲು ಅವಕಾಶವಿದೆಯೆ ಎಂಬುದರ ಬಗ್ಗೆ. | ಈ ಹಿಂದೆ ನಮ್ಮ ಸಂಸ್ಥೆಯ ಟೆಂಡರ್‌ನಲ್ಲಿ ಭಾಗವಹಿಸಲು ಪಡೆದಿರುವ "No Conviction Certificate” ಸಲ್ಲಿಸಲು ಅವಕಾಶವಿರುವುದಿಲ್ಲ ಎಂದು ತಿಳಿಸಿ ಈಗ ಆಹ್ವಾನಿಸಿರುವ ಟೆಂಡರ್‌ನಲ್ಲಿ ಭಾಗವಹಿಸಲು ಹೊಸದಾಗಿ ಡ್ರಗ್ ಕಂಟ್ರೋಲರ್ ಇವರಿಂದ "No Conviction Certificate” ಪಡೆದು ಸಲ್ಲಿಸತಕ್ಕದ್ದು ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |

| | | | |
|---|---|---|---|
| 4. | **<u>ಮೆ॥ ಲುಪಿನ್ ಲಿಮಿಟೆಡ್.</u>**<br>ಶ್ರೀ ಸುದರ್ಶನ್ ಡಿ. | ಒಂದೆ ತಯಾರಕರು ಉತ್ಪಾದಿಸಿದ ಎರಡು ಬ್ರಾಂಡ್‌ಗಳ ಔಷಧಿಗಳಿಗೆ ದರ ನಮೂದಿಸುವ ಬಗ್ಗೆ. | ಇ-ಪೋರ್ಟಲ್‌ನಲ್ಲಿ ಒಂದು ಔಷಧಿ/ವಸ್ತುವಿಗೆ ಒಂದು ದರ ಮಾತ್ರ ನಮೂದಿಸಲು ಅವಕಾಶವಿರುತ್ತದೆ. ಆದುದರಿಂದ ಒಂದು ಔಷಧಿ/ವಸ್ತುವಿಗೆ ಒಂದಕ್ಕಿಂತ ಹೆಚ್ಚಿಗೆ ದರಗಳನ್ನು ನಮೂದಿಸುವ ಅವಕಾಶವಿರುವುದಿಲ್ಲ ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |
| 5. | **<u>ಮೆ॥ ಬೌನ್‌ಡೋವ್ ಹೆಲ್ತ್‌ಕೇರ್ ಪ್ರೈ. ಲಿ.</u>**<br>ಶ್ರೀ. ಶ್ರೀನಿವಾಸನ್ ಎಮ್.ಸಿ. | ಕ್ರಮ ಸಂಖ್ಯೆ 228ರ Dual Lumen Catheter with Kit Straight tip\Curved lumen - 10 Fr. (for Peadiatric use) ಈ ವಸ್ತುವಿಗೆ 10 Fr. ಬದಲು 9 **Fr.** ನಮೂದಿಸಿದಲ್ಲಿ ಅದನ್ನು ಅಂಗೀಕರಿಸಲಾಗುವುದೆ ಎಂಬುದರ ಬಗ್ಗೆ. | ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ವಿವರಣೆಯುಳ್ಳ ಔಷಧಿ/ವಸ್ತುಗಳನ್ನು ಮಾತ್ರವೇ ಅಂಗೀಕರಿಸಲಾಗುವುದು ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. |

ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ನೆಫ್ರೋಲಜಿ ವಿಭಾಗ ಮತ್ತು ವಿಭಾಗದ ಮುಖ್ಯಸ್ಥರು, ಅನಸ್ಥೇಶಿಯಾಲಜಿ ವಿಭಾಗ ಇವರು ಈ ಕೆಳಕಂಡ ಔಷಧಿಗಳು ಜೀವರಕ್ಷಕ ಔಷಧಿಗಳಾಗಿರುವುದರಿಂದ ಸ್ಯಾಂಪಲ್ ಪಡೆದು ಉಪಯೋಗಿಸಿ ನಂತರ ಅಂಗೀಕರಿಸುವುದಾಗಿ ತಿಳಿಸಿದರು.

| Sl. No. | Tender No. | Name of the item | Specifications |
|---|---|---|---|
| 1. | 5 | Atracurium U.S.P. Inj. | 10mg/ml |
| 2. | 22 | Dextrose I.P. | 5% |
| 3. | 23 | Dextrose I.P. | 25% |
| 4. | 24 | Dextrose with Sodium Chlolride (DNS) I.P. | 0.9%+5% |
| 5. | 28 | Inj. Erythropoietin | Syringes |
| 6. | 29 | Inj. Erythropoietin | Syringes |
| 7. | 31 | Enalaprilat Inj. | 1.25mg/1ml Amps |
| 8. | 33 | Ferric Carboxy Maltase Inj. | 500mg/Vial |
| 9. | 44 | Isoflurane U.S.P. Inj. | 250ml |
| 10. | 51 | Meropenem Inj. | 0.5g. Vials with Water for Injection |
| 11. | 52 | Meropenem Inj. | 1.0g.Vials with Water for Injection |

| | | | |
|---|---|---|---|
| 12. | 59 | Nitroglycerin Inj. | 5 mg/ml |
| 13. | 71 | Rituximab Inj. | 500mg/Vial |
| 14. | 72 | Rituximab Inj. | 100mg/Vial |
| 15. | 86 | Vancomycin Inj. | 500mg |
| 16. | 87 | Vancomycin Inj. | 1gm |

ಟೆಂಡರ್‌ನ ಔಷಧಿಗಳ ಪಟ್ಟಿಯ ಪ್ರಕಾರ (Injections & Tablets) ಮೇಲ್ಕಂಡ ಔಷಧಿಗಳನ್ನು ಹೊರತುಪಡಿಸಿ ಬೇರೆ ಔಷಧಿಗಳಿಗೆ ಸ್ಯಾಂಪಲ್ ಒದಗಿಸಬೇಕಾಗಿಲ್ಲ. ಇನ್ನುಳಿದ ಎಲ್ಲಾ ಡಿಸ್ಪೋಸಬಲ್ಸ್ ಹಾಗೂ ಇತರೆ ವಸ್ತುಗಳಿಗೆ ಟೆಂಡರ್ ದಾಖಲೆ ಪ್ರಕಾರ ಸ್ಯಾಂಪಲ್ ಒದಗಿಸುವುದು. ಸ್ಯಾಂಪಲ್ ಉಪಯೋಗಿಸಿ ನಂತರ ವಿಭಾಗದ ಮುಖ್ಯಸ್ಥರು ನೀಡುವ ವರದಿ ಆದರಿಸಿ ಔಷಧಿ/ವಸ್ತುಗಳನ್ನು ಅಂಗೀಕರಿಸಲಾಗುವುದು ಎಂದು ಸಮಿತಿಯು ತೀರ್ಮಾನಿಸಿತು.

II. **ನಮೂನೆ ಮತ್ತು ವಹಿಗಳ ಮುದ್ರಣ:**

| ಕ್ರ.ಸಂ. | ಸಂಸ್ಥೆಯ ಹೆಸರು/ಪ್ರತಿನಿಧಿ | ಪ್ರಶ್ನೆ | ಸ್ಪಷ್ಟೀಕರಣ |
|---|---|---|---|
| 1. | **ಮೆ|| ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್**<br>ಶ್ರೀ. ಪಿ.ಎಸ್. ವೆಂಕಟೇಶ್ ಬಾಬು | ಟೆಂಡರ್‌ನಲ್ಲಿ ಲೆಡ್ಜರ್‌ಗಳ ಅಳತೆಗಳನ್ನು ನಮೂದಿಸಿರುವುದಿಲ್ಲ ಅದನ್ನು ಒದಗಿಸಲು ಕೋರಿದರು. | ಲೆಡ್ಜರ್‌ಗಳನ್ನು ಲೀಗಲ್ ಅಳತೆಯಲ್ಲಿ (w 8.5" X L14") ನಮೂದಿಸಲು ಸಮಿತಿಯು ಸೂಚಿಸಿತು. |
| | | ಕ್ರಮ ಸಂಖ್ಯೆ 7ರ ನಮೂನೆಗೆ ಪೇಪರ್‌ನ ವಿವರಣೆ ಇರುವುದಿಲ್ಲ. ಅದನ್ನು ಒದಗಿಸಲು ಕೋರಿದರು. | ಕ್ರಮ ಸಂಖ್ಯೆ 7ರ ನಮೂನೆಗೆ 70 GSM ಪೇಪರ್ ಎಂದು ಸಮಿತಿಯು ಸ್ಪಷ್ಟೀಕರಣ ನೀಡಿತು. ಹಾಗೂ ಟೆಂಡರ್‌ನಲ್ಲಿ ನಮೂದಿಸಿರುವ ಎಲ್ಲಾ ನಮೂನೆ ಹಾಗೂ ವಹಿಗಳ ಮಾದರಿಯನ್ನು ತೋರಿಸಲಾಯಿತು. |

ಸಭೆಯಲ್ಲಿ ಹಾಜರಿದ್ದವರಿಗೆ ವಂದನೆಗಳನ್ನು ಸಲ್ಲಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ನಿರ್ದೇಶಕರು,
ನೆಫ್ರೋ-ಯುರಾಲಜಿ ಸಂಸ್ಥೆ,
ಬೆಂಗಳೂರು.